**ಕರ್ನಾಟಕ ಸರ್ಕಾರ**
**ಅಡ್ವೊಕೇಟ್ ಜನರಲ್‌ರವರ ಕಛೇರಿ**
**ಉಚ್ಛನ್ಯಾಯಾಲಯ, ಹಳೆಯ ಕೆ.ಜಿ.ಐ.ಡಿ. ಕಟ್ಟಡ, ಬೆಂಗಳೂರು –560 001.**

**ಅಡ್ವೊಕೇಟ್ ಜನರಲ್‌ರವರ ಕಛೇರಿಯಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳಿಗಾಗಿ ಅರ್ಜಿ ಆಹ್ವಾನ.**

# ಅಧಿಸೂಚನೆ

**ಸಂಖ್ಯೆ:233/ಎಜಿ/ಸಿಬ್ಬಂದಿ/2017-18, ದಿನಾಂಕ:12.12.2017**

ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಕಡ್ಡಾಯವಾಗಿ ಕಛೇರಿಯ ಅಂತರ್ಜಾಲದಲ್ಲಿ (www.advgen.kar.nic.in) ನೀಡಿರುವ ಸೂಚನೆಗಳನ್ನು ಓದತಕ್ಕದ್ದು ಹಾಗೂ ನೀಡಿರುವ ಸೂಚನೆಗಳನ್ವಯ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.

ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಾನುಸಾರ ಶೀಘ್ರಲಿಪಿಗಾರರ 37 ಹುದ್ದೆಗಳು ಮತ್ತು ಬೆರಳಚ್ಚುಗಾರರ 01 ಹುದ್ದೆಯ ಭರ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಹತೆಯುಳ್ಳ ಅಭ್ಯರ್ಥಿಗಳು ಅಂತರ್ಜಾಲದಲ್ಲಿ ನಮೂದಿಸಿರುವ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಬೇಕು. ಅಭ್ಯರ್ಥಿಗಳು ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವುದು.

| | | |
|---|---|---|
| ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | : | **31.01.2018** |
| ಅರ್ಜಿಗಳನ್ನು ಸಲ್ಲಿಸಬೇಕಾದ ವಿಳಾಸ | : | ಆಡಳಿತಾಧಿಕಾರಿ,<br>ಅಡ್ವೊಕೇಟ್ ಜನರಲ್‌ರವರ ಕಛೇರಿ,<br>ಉಚ್ಛನ್ಯಾಯಾಲಯ, ಹಳೆಯ<br>ಕೆ.ಜಿ.ಐ.ಡಿ. ಕಟ್ಟಡ,<br>ಬೆಂಗಳೂರು –560 001. |

**ಶೀಘ್ರಲಿಪಿಗಾರರ ವೇತನ ಶ್ರೇಣಿ :** 16000-400-17200-450-19000-500-21000-600-24600-700-28800-800-29600

**ಬೆರಳಚ್ಚುಗಾರರ ವೇತನ ಶ್ರೇಣಿ :** 11600-200-12000-250-13000-300-14200-350-15600-400-17200-450-19000-500-21000

**1.ಶೀಘ್ರಲಿಪಿಗಾರರ ಹುದ್ದೆಗಳ ವರ್ಗೀಕರಣ:– (ಒಟ್ಟು ಹುದ್ದೆಗಳು –35)**

| ಪ್ರವರ್ಗ | ಸಾಮಾನ್ಯ | ಮಹಿಳಾ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತರು | ಅಂಗ ವಿಕಲ | ಒಟ್ಟು |
|---|---|---|---|---|---|---|---|---|
| ಸಾಮಾನ್ಯ | 04 | 05 | 04 | 02 | - | 01 | 01 | **17** |
| ಪರಿಶಿಷ್ಟ ಜಾತಿ | - | 02 | 02 | - | 01 | - | - | **05** |
| ಪರಿಶಿಷ್ಟ ಪಂಗಡ | - | - | 01 | - | - | - | 01 | **02** |
| ಪ್ರವರ್ಗ–1 | - | - | - | - | - | - | 01 | **01** |
| ಪ್ರವರ್ಗ–2ಎ | 01 | 02 | 01 | - | 01 | - | - | **05** |
| ಪ್ರವರ್ಗ–2ಬಿ | - | - | - | - | - | - | 01 | **01** |
| ಪ್ರವರ್ಗ–3ಎ | - | - | 01 | - | - | - | 01 | **02** |
| ಪ್ರವರ್ಗ–3ಬಿ | - | 01 | - | - | - | - | 01 | **02** |
| **ಒಟ್ಟು** | **05** | **10** | **09** | **02** | **02** | **01** | **06** | **35** |

**ಅನುಚ್ಛೇದ 371 (ಜೆ) ರನ್ವಯ ಹೈದರಾಬಾದ್– ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಶೀಘ್ರಲಿಪಿಗಾರರ ಹುದ್ದೆಗಳ ವರ್ಗೀಕರಣ (ಒಟ್ಟು ಹುದ್ದೆಗಳು –02)**

| ಪ್ರವರ್ಗ | ಸಾಮಾನ್ಯ | ಮಹಿಳಾ | ಗ್ರಾಮೀಣ | ಮಾಜಿ ಸೈನಿಕ | ಅಂಗವಿಕಲರು | ಕನ್ನಡ ಮಾಧ್ಯಮ | ಒಟ್ಟು |
|---|---|---|---|---|---|---|---|
| ಸಾಮಾನ್ಯ | - | 01 | - | - | - | - | **01** |
| ಪ್ರವರ್ಗ–1 | - | 01 | - | - | - | - | **01** |
| **ಒಟ್ಟು** | **-** | **02** | **-** | **-** | **-** | **-** | **02** |

**ಶೀಘ್ರಲಿಪಿಗಾರರ ಹುದ್ದೆಗೆ ವಿದ್ಯಾರ್ಹತೆಗಳು:**

1. ಎಸ್. ಎಸ್. ಎಲ್. ಸಿ. ಅಥವಾ ತತ್ಸಮಾನ ವಿದ್ಯಾರ್ಹತೆ;
2. ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯವರು ನಡೆಸುವ ಆಂಗ್ಲ ಮತ್ತು ಕನ್ನಡ ಬೆರಳಚ್ಚುಗಾರರ ಪರೀಕ್ಷೆಯಲ್ಲಿ ಪ್ರೌಢದರ್ಜೆ ಮತ್ತು ಶೀಘ್ರಲಿಪಿ ಪರೀಕ್ಷೆಯಲ್ಲಿ ಪ್ರೌಢದರ್ಜೆಯಲ್ಲಿ ತೇರ್ಗಡೆ ಹೊಂದಿರಬೇಕು, ಅಥವಾ ತತ್ಸಮಾನ ವಿದ್ಯಾರ್ಹತೆ.
3. ಕಂಪ್ಯೂಟರ್ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

**2. ಬೆರಳಚ್ಚುಗಾರರ ಹುದ್ದೆಯ ವರ್ಗೀಕರಣ:- (ಒಟ್ಟು ಹುದ್ದೆ –01)**

**ಅನುಚ್ಛೇದ 371 (ಜೆ) ರನ್ವಯ ಹೈದರಾಬಾದ್- ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಬೆರಳಚ್ಚುಗಾರ ಹುದ್ದೆಗೆ ವರ್ಗೀಕರಣ (ಒಟ್ಟು ಹುದ್ದೆ –01)**

| ಪ್ರವರ್ಗ | ಸಾಮಾನ್ಯ | ಮಹಿಳಾ | ಗ್ರಾಮೀಣ | ಮಾಜಿ ಸೈನಿಕ | ಅಂಗವಿಕಲರು | ಕನ್ನಡ ಮಾಧ್ಯಮ | **ಒಟ್ಟು** |
|---|---|---|---|---|---|---|---|
| ಸಾಮಾನ್ಯ | - | 01 | - | - | - | - | **01** |
| **ಒಟ್ಟು** | **-** | **01** | **-** | **-** | **-** | **-** | **01** |

**ಬೆರಳಚ್ಚುಗಾರರ ಹುದ್ದೆಗೆ ವಿದ್ಯಾರ್ಹತೆಗಳು:**

1. ಎಸ್. ಎಸ್. ಎಲ್. ಸಿ. ಅಥವಾ ತತ್ಸಮಾನ ವಿದ್ಯಾರ್ಹತೆ;
2. ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯವರು ನಡೆಸುವ ಆಂಗ್ಲ ಮತ್ತು ಕನ್ನಡ ಬೆರಳಚ್ಚುಗಾರರ ಪರೀಕ್ಷಯಲ್ಲಿ ಪ್ರೌಢದರ್ಜೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.
3. ಕಂಪ್ಯೂಟರ್ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

## ವಯೋಮಿತಿ:

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಕನಿಷ್ಠ 18 ವರ್ಷಗಳು ತುಂಬಿರಬೇಕು ಮತ್ತು ಈ ಕೆಳಕಂಡ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

1) ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ:ಪ್ರವರ್ಗ -1 : 40 ವರ್ಷಗಳು
2) ಸಾಮಾನ್ಯ ವರ್ಗ : 35 ವರ್ಷಗಳು
3) ಇತರೆ ಹಿಂದುಳಿದ ವರ್ಗಗಳು 2ಎ, 2ಬಿ, 3ಎ, 3ಬಿ : 38 ವರ್ಷಗಳು

- ಮಾಜಿ ಸೈನಿಕರಿಗೆ ಕೇಂದ್ರ ಸಶಸ್ತ್ರ ಪಡೆಯಲ್ಲಿ ಅವರು ಸೇವೆ ಸಲ್ಲಿಸಿದ ಅವಧಿಯ ಜೊತೆಗೆ ಮೂರು ವರ್ಷಗಳು ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

- ಅಭ್ಯರ್ಥಿಯು ದೈಹಿಕ ಅಂಗವಿಕಲತೆ ಹೊಂದಿರುವ ಸಂದರ್ಭದಲ್ಲಿ ಹತ್ತು ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

- ಅರ್ಜಿದಾರರು ಈಗಾಗಲೇ ಸೇವೆ ಸಲ್ಲಿಸುತ್ತಿರುವ ಇಲಾಖಾ ಮುಖ್ಯಸರಿಂದ ಅರ್ಜಿಗಳನ್ನು ಕಳುಹಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಕರ್ನಾಟಕ ಸಿವಿಲ್ ಸೇವೆಗಳು(ಸಾಮಾನ್ಯ ನೇಮಕಾತಿ) ನಿಯಮ 1977 ರ ಅಡಿಯಲ್ಲಿ ನಮೂದಿಸಿರುವ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದು.

## :ಸೂಚನೆಗಳು:

**1. ಶುಲ್ಕ:**

| | |
|---|---|
| ಸಾಮಾನ್ಯ ಅರ್ಹತೆ ಅಭ್ಯರ್ಥಿಗಳಿಗೆ | ರೂ.300/- |
| ಪ್ರವರ್ಗ 2(ಎ), 2(ಬಿ), 3(ಎ) ಮತ್ತು 3(ಬಿ)ಅಭ್ಯರ್ಥಿಗಳಿಗೆ | ರೂ.150/- |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಮತ್ತು ಅಂಗವಿಕಲ | ಶುಲ್ಕ ವಿನಾಯಿತಿ ಇರುತ್ತದೆ |

ಅರ್ಜಿಯೊಂದಿಗೆ ಮೇಲೆ ನಿಗದಿಪಡಿಸಿದ ಮೊತ್ತದ ಇಂಡಿಯನ್ ಪೋಸ್ಟಲ್ ಆರ್ಡರ್‌ನ್ನು ಆಡಳಿತಾಧಿಕಾರಿ ಅಡ್ವೊಕೇಟ್ ಜನರಲ್‌ರವರ ಕಛೇರಿ, ಉಚ್ಛನ್ಯಾಯಾಲಯ ಕಟ್ಟಡ, ಬೆಂಗಳೂರು-560 001, ಇವರ ಹೆಸರಿನಲ್ಲಿ ಪಡೆದು ಲಗತ್ತಿಸತಕ್ಕದ್ದು. (ಈ ಅಧಿಸೂಚನೆಯ ದಿನಾಂಕದ ನಂತರದ ಅಥವಾ ಹಿಂದಿನ ಹದಿನೈದು ದಿವಸಗಳ ಒಳಗಾಗಿ ಪಡೆದ ಪೋಸ್ಟಲ್ ಆರ್ಡರ್ ಮಾತ್ರ ಲಗತ್ತಿಸತಕ್ಕದ್ದು, ತೀರಾ ಹಳೆಯ ದಿನಾಂಕದ ಪೋಸ್ಟಲ್ ಆರ್ಡರ್‌ಗಳನ್ನು ಲಗತ್ತಿಸಬಾರದು).

2. ಅರ್ಜಿ ಭರ್ತಿ ಮಾಡುವಾಗ ಅಭ್ಯರ್ಥಿಗಳು ನೀಡುವ ವಿವರಗಳು ತಪ್ಪಿರಬಾರದು ಮತ್ತು ಯಾವುದೇ ವಿವರಗಳನ್ನು ಮುಚ್ಚಿಡಬಾರದು. ಅರ್ಜಿಯ ಜೊತೆಗೆ ಲಗತ್ತಿಸಲಾದ ದಾಖಲೆಗಳಲ್ಲಿ ನೀಡಲಾದ ವಿವರಗಳನ್ನು ತಿದ್ದಬಾರದು ಅಥವಾ ಬದಲಾಯಿಸಬಾರದು.

3. ಅಭ್ಯರ್ಥಿಗಳ ನೇಮಕಾತಿ ಮಾಡುವಾಗ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 08 ಸಹಿಮ 95, ದಿನಾಂಕ: 20ನೇ ಜೂನ್ 1995 ರಂತೆ ಮತ್ತು ಸಿಆಸುಇ 53 ಸೇನೇನಿ 2007, ದಿನಾಂಕ: 04.01.2008 ರಂತೆ ಮೀಸಲಾತಿ ನಿಯಮಗಳನ್ನು ಅನುಸರಿಸಲಾಗುವುದು.

4. ಅಪೂರ್ಣವಾದ, ಲಗತ್ತುಗಳಿಲ್ಲದ ಮತ್ತು ಕೊನೆಯ ದಿನಾಂಕ ಮುಗಿದ ನಂತರ ಬಂದ ಅರ್ಜಿಗಳನ್ನು ಯಾವುದೇ ಸೂಚನೆ ಇಲ್ಲದೆ ತಿರಸ್ಕರಿಸಲಾಗುವುದು.

5. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಶೀಲ್ದಾರ್‌ರವರಿಂದ ಅಂದರೆ ತಹಶೀಲ್ದಾರ್‌ರವರ ಸಹಿ ಮತ್ತು ಮೊಹರು ಅಥವಾ ಬಾರ್ ಕೋಡ್, ಹಾಲೋಗ್ರಾಮ್ ಮತ್ತು ವಾಟರ್ ಮಾರ್ಕ್‌ನೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ರ ಮೀಸಲಾತಿ ಪ್ರಮಾಣ ಪತ್ರಗಳು ರದ್ದಾಗುವವರೆಗೂ ಚಾಲ್ತಿಯಲ್ಲಿರುವುದರಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ನಿಗದಿಪಡಿಸಿದ ನಮೂನೆಯಲ್ಲಿ ಪಡೆದಿಟ್ಟುಕೊಂಡಿರತಕ್ಕದ್ದು. ಹಿಂದುಳಿದ ವರ್ಗಗಳ ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ ಮತ್ತು ಪ್ರವರ್ಗ-3ಬಿ ವರ್ಗದ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರತಕ್ಕದ್ದು. ಅರ್ಜಿಯ ನಿಗದಿತ ಸ್ಥಳದಲ್ಲಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ನಮೂದಿಸತಕ್ಕದ್ದು ಹಾಗೂ ಸಂದರ್ಶನಕ್ಕೆ / ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾದಾಗ ಇದೇ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದು ಪಡಿಸಿ ಅವರ ಅಭ್ಯರ್ಥಿತನವನ್ನು ಸಾಮಾನ್ಯ ಅರ್ಹತೆಯಡಿಯಲ್ಲಿ ಅರ್ಹರಾದಲ್ಲಿ ಮಾತ್ರ ಪರಿಗಣಿಸಲಾಗುವುದು. ಮೀಸಲಾತಿಯನ್ನು ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ನೇಮಕಾತಿಗಳು ಮುಂತಾದವುಗಳ ನಿಯಮಗಳು 1992 ರನಮೂನೆ-ಡಿ (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ), ನಮೂನೆ-ಇ (ಪ್ರವರ್ಗ-1), ಮತ್ತು ನಮೂನೆ-ಎಫ್ (2ಎ, 2ಬಿ, 3ಎ, 3ಬಿ) ರ ಅಡಿಯಲ್ಲಿ ನೀಡಲಾಗುವ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

6. ಅನುಚ್ಛೇದ 371(ಜೆ) ರನ್ವಯ ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನಿಗದಿಪಡಿಸಲಾದ ಮೀಸಲಾತಿ ಸೌಲಭ್ಯವನ್ನು ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ:ಡಿಪಿಎಆರ್ 43 ಹೆಚ್‌ಕೆಸಿ 2013 ದಿನಾಂಕ: 29.01.2014ರ ಪ್ರಕಾರ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ಆದೇಶ 2013ರ ಪ್ರಕಾರ ನಿಗದಿತ ನಮೂನೆಯಲ್ಲಿ ಧೃಡೀಕರಣ ಪತ್ರವನ್ನು ನೀಡತಕ್ಕದ್ದು.

7. ಅಭ್ಯರ್ಥಿಯು ಕರ್ನಾಟಕ ರಾಜ್ಯ ಸರ್ಕಾರದ ಸೇವೆಯಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಯಾದ ಅಥವಾ ರಾಜ್ಯ ಅಧಿನಿಯಮದ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಗೊಂಡು ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ನಿಗಮದಲ್ಲಿ ಹುದ್ದೆ ಹೊಂದಿರುವ ನೌಕರರು ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಂದ ಪಡೆದಿಟ್ಟುಕೊಂಡಿರತಕ್ಕದ್ದು.

8. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯದ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

9. ಅಭ್ಯರ್ಥಿಯು ವಿದ್ಯಾಭ್ಯಾಸ ಮಾಡಿದ ಶಾಲೆ/ಕಾಲೇಜು ಮುಖ್ಯಸ್ಥರು ಅಭ್ಯರ್ಥಿಯ ನಡತೆ ಮತ್ತು ಪೂರ್ವೋತ್ತರಗಳ ಬಗ್ಗೆ ನೀಡಿದ ಪ್ರಮಾಣ ಪತ್ರ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

10. ಅಭ್ಯರ್ಥಿಯು ವಾಸಿಸುತ್ತಿರುವ ಸ್ಥಳದ ಇಬ್ಬರು ಗಣ್ಯ ವ್ಯಕ್ತಿಗಳು ಅಭ್ಯರ್ಥಿಯ ನಡತೆ ಮತ್ತು ಪೂರ್ವೋತ್ತರಗಳ ಬಗ್ಗೆ ನೀಡಿದ ಆರು ತಿಂಗಳಿಗೂ ಹಳೆಯದಲ್ಲದ ಪ್ರಮಾಣಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

11. ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಹುದ್ದೆಗೆ ಸೂಚಿಸಿರುವ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು.

12. ಸದರಿ ಹುದ್ದೆಗೆ ನಿಗದಿಪಡಿಸಲಾಗಿರುವ ವಿದ್ಯಾರ್ಹತೆಗೆ ಸಂಬಂಧಪಟ್ಟಂತೆ ದ್ವಿಪ್ರತಿಯಲ್ಲಿ ಅಂಕಪಟ್ಟಿಗಳನ್ನು ಲಗತ್ತಿಸತಕ್ಕದ್ದು.

13. ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮತ್ತು ಇತರೆ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳು ತಮ್ಮ ಜಾತಿ ಪ್ರಮಾಣ ಪತ್ರದ ಪ್ರತಿಗಳನ್ನು ಲಗತ್ತಿಸಬೇಕು.

14. ಆಯ್ಕೆಯಾದ ಅಭ್ಯರ್ಥಿಗಳು ಬೆಂಗಳೂರು : ಕಲಬುರ್ಗಿ : ಧಾರವಾಡ : ಕೆ.ಎ.ಟಿ. ಘಟಕ ಬೆಂಗಳೂರು, ಇಲ್ಲಿ ಕೆಲಸ ನಿರ್ವಹಿಸತಕ್ಕದ್ದು.

15. ಸರ್ಕಾರಿ ಇಲಾಖೆಗಳಲ್ಲಿ ಅಥವಾ ಇತರ ಸಂಸ್ಥೆಗಳಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವವರು ತಮ್ಮ ಮೇಲಧಿಕಾರಿಗಳ ಮೂಲಕ ಅರ್ಜಿ ಸಲ್ಲಿಸಬೇಕು.

16. ಅರ್ಜಿಗಳನ್ನು ಹೊಂದಿದ ಲಕೋಟೆಯ ಮೇಲೆ "ಅಡ್ವೊಕೇಟ್ ಜನರಲ್‌ರವರ ಕಛೇರಿಯಲ್ಲಿ ಶೀಘ್ರಲಿಪಿಗಾರರ/ ಬೆರಳಚ್ಚುಗಾರರ ಹುದ್ದೆಗೆ ಅರ್ಜಿ" ಎಂದು ನಮೂದಿಸತಕ್ಕದ್ದು.
17. ಮಹಿಳೆಯರಿಗೆ/ಮಾಜಿ ಸೈನಿಕರಿಗೆ/ಗ್ರಾಮೀಣ/ಕ.ಮಾ.ಅ. ಅಭ್ಯರ್ಥಿಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.
18. ಹೆಚ್ಚಿನ ವಿವರಗಳಿಗಾಗಿ ಆಡಳಿತಾಧಿಕಾರಿಯವರು, ಅಡ್ವೊಕೇಟ್ ಜನರಲ್ ರವರ ಕಛೇರಿ, ಉಚ್ಚನ್ಯಾಯಾಲಯ ಕಟ್ಟಡ, ಬೆಂಗಳೂರು ರವರನ್ನು ಸಂಪರ್ಕಿಸಿ. ದೂರವಾಣಿ ಸಂಖ್ಯೆ: ೦8೦-22862583

**19. ಗ್ರಾಮೀಣ ಅಭ್ಯರ್ಥಿ**

ಸರ್ಕಾರಿ ಅಧಿಸೂಚನೆ ಸಂಖ್ಯೆ ಸಂ.ವ್ಯೆ ಶಾಇ 59 ಶಾಸನ 2000 ದಿನಾಂಕ 06.01.2001 ರನ್ವಯ ಗ್ರಾಮೀಣ ಮೀಸಲಾತಿಯಡಿ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ನಿಯಮಗಳ ರೀತ್ಯಾ 1 ರಿಂದ 10 ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದಲ್ಲಿ ಮಾತ್ರ ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 08ಸೆನೆನಿ 2001 ದಿನಾಂಕ:13.02.2001ರ ಅನ್ವಯ ನಮೂನೆ 2ನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ / ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-1 ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ತಹಸಿಲ್ದಾರ್‌ರವರಿಂದ ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು. ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ಮೇಲೆ ತಿಳಿಸಿದ ಸರ್ಕಾರಿ ಆದೇಶದ ಪ್ರಕಾರ ನಮೂನೆ-೨ರಲ್ಲಿ ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಸಂದರ್ಶನಕ್ಕೆ/ ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಗ್ರಾಮೀಣ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

**20. ಕನ್ನಡ ಮಾಧ್ಯಮ ಅಭ್ಯರ್ಥಿ**

ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಆಸುಇ 71 ಸೇನಿನಿ 2001 ದಿನಾಂಕ 24.10.2002 ರನ್ವಯ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿಸಲ್ಲಿಸುವಂತಹ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯಮುಖ್ಯೋಪಾಧ್ಯಾಯರ ಸಹಿ ಹಾಗೂ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಸಂದರ್ಶನಕ್ಕೆ/ ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

**21. ಅಂಗವಿಕಲ ಅಭ್ಯರ್ಥಿಗಳು:**

ಅಂಗವಿಕಲ ಅಭ್ಯರ್ಥಿಗಳು ಸರ್ಕಾರಿ ಆಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 115 ಸೇನನಿ 2005 ದಿನಾಂಕ 19.11.2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಮಮಇ 65 ಪಿಹೆಚ್ ಪಿ 2010 ದಿನಾಂಕ 18.02.2011 ರಂತೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಕೀಯ ಪ್ರಾಧಿಕಾರ/ತಾಲ್ಲೂಕು ಮಟ್ಟದ ವೈದ್ಯಕೀಯ ಪ್ರಾಧಿಕಾರ/ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಾಧಿಕಾರ/ಬೆಂಗಳೂರು ವೈದ್ಯಕೀಯ ಪ್ರಾಧಿಕಾರ ಇವರಿಂದ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು. ಸಂದರ್ಶನಕ್ಕೆ/ ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು/ ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ ಮೇಲೆ ತಿಳಿಸಿರುವ ಸರ್ಕಾರಿ ಆದೇಶದಲ್ಲಿ ನಮೂದಿಸಿರುವ ನಮೂನೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ/ಸಕ್ಷಮ ಪ್ರಾಧಿಕಾರದವರು ನೀಡುವ ಅಂಗವಿಕಲತೆಯ ಬಗ್ಗೆ ಪ್ರಮಾಣ ಪತ್ರವನ್ನು ಪಡೆದು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

**22. ಮಾಜಿ ಸೈನಿಕ**

ಆಭ್ಯರ್ಥಿಗಳು ಮಾಜಿ ಸೈನಿಕರ ಅಡಿಯಲ್ಲಿ ಅರ್ಜಿ ಸಲ್ಲಿಸುವವರು ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮ 1977ರ ಉಪನಿಯಮ (i) ರ ನಿಯಮ 2ರ ಅಡಿಯಲ್ಲಿ ವಿಧಿಸಿರುವ

ಎಲ್ಲಾ ಅರ್ಹತೆಗಳನ್ನು ಹೊಂದಿರತಕ್ಕದ್ದು.ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಮಾಜಿ ಸೈನಿಕರಾಗಿ ಸೇವೆ ಸಲ್ಲಿಸಿರುವುದರ ಬಗ್ಗೆ ಧೃಢೀಕರಣ ಪತ್ರವನ್ನು ಹೊಂದಿರತಕ್ಕದ್ದು.ಧೃಢೀಕರಿಸಿದ ಸೇವಾ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಸಂದರ್ಶನಕ್ಕೆ/ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಸದರಿ ಪ್ರಮಾಣ ಪತ್ರದ ಮೂಲ ಪತ್ರವನ್ನು ಪರಿಶೀಲನೆಗೆ ತಪ್ಪದೇ ಹಾಜರು ಪಡಿಸತಕ್ಕದ್ದು.ತಪ್ಪಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

## 23. ಯೋಜನಾ ನಿರಾಶ್ರಿತ ಅಭ್ಯರ್ಥಿ

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 23 ಸೇನೆನಿ 99 ದಿನಾಂಕ: 23.11.2000 ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಈ ನಿಯಮಗಳೂ ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬ ಅಭ್ಯರ್ಥಿಗಳಿಗೆ ಈ ಮೀಸಲಾತಿ ಅನ್ವಯವಾಗುವುದಿಲ್ಲ) ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಸಂಬಂಧಿತ ತಹಶೀಲ್ದಾರರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು, ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

## 24. ಅನುಚ್ಛೇದ 371 (ಜೆ) ರಂತೆ ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ನಿಗದಿಪಡಿಸಲಾದ ಮೀಸಲಾತಿ

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013 ಕ್ಕೆ ಸಂಬಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನು ಕೋರುವ ಅನುಬಂಧ-ಎ ರಲ್ಲಿರುವ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣಪತ್ರವನ್ನು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವಾದ ಉಪ ವಿಭಾಗದ ಸಹಾಯಕ ಆಯುಕ್ತರಿಂದ ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಳ್ಳತಕ್ಕದ್ದು. ಈ ಪ್ರಮಾಣ ಪತ್ರದ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ತಿರಿಸ್ಕರಿಸಲಾಗುವುದು. ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳು ರಾಜ್ಯ ವೃಂದಕ್ಕೆ ಸೇರಿದ ಹುದ್ದೆಗಳಿಗೂ ಅರ್ಹತೆ ಇದ್ದಲ್ಲಿ ಪರಿಗಣಿಸಲಾಗುವುದು.

### 25. ಸರ್ಕಾರಿ ಸೇವೆಯಲ್ಲಿರುವ ನೌಕರರಿಗೆ ಹೈದರಾಬಾದ್- ಕರ್ನಾಟಕ ಮೀಸಲಾತಿ

ಸರ್ಕಾರಿ ಸೇವೆಯಲ್ಲಿರುವ ನೌಕರರು ದಿನಾಂಕ 29.01.2014 ರಂದು ಹೊರಡಿಸಲಾದ ಅಧಿಸೂಚನೆ-1 ಸಂಖ್ಯೆ ಡಿಪಿಎಆರ್ 43 ಹೆಚ್‌ಕೆಸಿ 2013 ರಲ್ಲಿನ ಅನುಬಂಧ-ಎ ನಲ್ಲಿ ಇರುವಂತೆ ತಮ್ಮ ಸೇವಾ ಪುಸ್ತಕದಲ್ಲಿ ದಿನಾಂಕ 01.01.2003 ಕ್ಕಿಂತ ಮುಂಚಿನ ನಮೂದಿನಲ್ಲಿ ಅವರ ಸ್ವಂತ ಊರು ಅಥವಾ ಸ್ಥಳಕ್ಕೆ ಸಂಬಂಧಿಸಿದಂತೆಹೈದ್ರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಬೀದರ್, ಕಲಬುರ್ಗಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಯಾದಗಿರಿ ಕಂದಾಯ ಜಿಲ್ಲೆಗಳ ಅಡಿಯಲ್ಲಿ ಬರುವಂತಹ ಪ್ರದೇಶದ ನಮೂದು ಇದ್ದ ಪಕ್ಷದಲ್ಲಿ, ಅಂತಹ ಅಭ್ಯರ್ಥಿಗಳು ಕಛೇರಿ ಮುಖ್ಯಸ್ಥರಿಂದ ದಿ:29.01.2014 ರ ಅಧಿಸೂಚನೆ-1 ರಲ್ಲಿನ ನಿಯಮ 5(2) ರಲ್ಲಿ ನೀಡಲಾದ ಸ್ವಗ್ರಾಮ ಪ್ರಮಾಣ ಪತ್ರವನ್ನು ಆಧರಿಸಿ ಅಂತಹವರ ಅರ್ಜಿಯನ್ನು ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗೆದುರಾಗಿ ಪರಿಗಣಿಸಲಾಗುವುದು. ಮೇಲಿನ ನಿಯಮದ ಪ್ರಕಾರ ಸಂಬಂಧಪಟ್ಟ ಅನುಬಂಧ-ಎ ಪ್ರತಿಯನ್ನು ಅರ್ಜಿಯ ಜೊತೆ ಲಗತ್ತಿಸುವುದು.

ಸಹಿ/-
ಆಡಳಿತಾಧಿಕಾರಿ,
ಅಡ್ವೊಕೇಟ್ ಜನರಲ್‌ರವರ ಕಛೇರಿ,
ಉಚ್ಛನ್ಯಾಯಾಲಯದ ಕಟ್ಟಡ,
ಬೆಂಗಳೂರು –560001

**ಕರ್ನಾಟಕ ಸರ್ಕಾರ**
**ಅಡ್ವೋಕೇಟ್ ಜನರಲ್‌ರವರ ಕಛೇರಿ**
**ಉಚ್ಚನ್ಯಾಯಾಲಯ, ಹಳೆಯ ಕೆ.ಜಿ.ಐ.ಡಿ, ಕಟ್ಟಡ, ಬೆಂಗಳೂರು –560 001.**

ಭಾವಚಿತ್ರ

ಗೆ,

ಆಡಳಿತಾಧಿಕಾರಿ,
ಅಡ್ವೋಕೇಟ್ ಜನರಲ್‌ರವರ ಕಛೇರಿ,
ಉಚ್ಚನ್ಯಾಯಾಲಯ, ಹಳೆಯ ಕೆ.ಜಿ.ಐ.ಡಿ, ಕಟ್ಟಡ,
ಬೆಂಗಳೂರು –**560 001**.

ಈ ಇಲಾಖೆಯ ಅಧಿಸೂಚನೆ ಸಂಖ್ಯೆ ______________________ ದಿನಾಂಕ ___________ ಕ್ಕೆ ಅನುಸಾರವಾಗಿ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಹುದ್ದೆಗೆ ನನ್ನ ಅರ್ಜಿಯನ್ನು ಈ ಕೆಳಕಂಡ ಮಾಹಿತಿಯೊಂದಿಗೆ ಸಲ್ಲಿಸುತ್ತಿದ್ದೇನೆ.

| | | |
|---|---|---|
| 1. | ಅಭ್ಯರ್ಥಿಯ ಪೂರ್ಣ ಹೆಸರು : | |
| | ಅಭ್ಯರ್ಥಿಯ ತಂದೆ/ತಾಯಿ/ಪೋಷಕ/ ಹೆಂಡತಿ/ಗಂಡನ ಹೆಸರು: | |
| 2. | ಅಭ್ಯರ್ಥಿಯ ಅಂಚೆ ವಿಳಾಸ :<br><br>ಮೊಬೈಲ್ ಸಂಖ್ಯೆ:<br>ದೂರವಾಣಿ ಸಂಖ್ಯೆ: | |
| | ಅಭ್ಯರ್ಥಿಯ ಖಾಯಂ ವಿಳಾಸ : | |
| 3. | ಅಭ್ಯರ್ಥಿಯ ಹುಟ್ಟಿದ ದಿನಾಂಕ ಮತ್ತು ವಯಸ್ಸು: | |
| 4. | ಭಾರತೀಯ ಪೌರರೇ? ಅಲ್ಲದಿದ್ದರೆ ನಿಮ್ಮ ಪೌರತ್ವದ ಬಗ್ಗೆ ಪೂರ್ಣ ವಿವರ ಕೊಡಿ. | |
| 5. | ಅಭ್ಯರ್ಥಿಯು:– | |
| | 1. ಅಂಗವಿಕಲರೇ? | ಹೌದು/ಇಲ್ಲ |
| | 2. ಮಾಜಿ ಸೈನಿಕರೇ? | ಹೌದು/ಇಲ್ಲ |
| | 3. ಗ್ರಾಮೀಣ ಅಭ್ಯರ್ಥಿಯೇ ? | ಹೌದು/ ಇಲ್ಲ |

| | | |
|---|---|---|
| | 4. ಕನ್ನಡ ಮಾದ್ಯಮ ಅಭ್ಯರ್ಥಿಯೇ ? | ಹೌದು/ಇಲ್ಲ |
| | 5. ಹೈ.ಕ. ಪ್ರದೇಶಕ್ಕೆ ಸೇರಿದವರೇ ? | ಹೌದು/ ಇಲ್ಲ |
| | 6. ಪರಿಶಿಷ್ಟ ಜಾತಿಗೆ(ಎಸ್.ಸಿ.)ಸೇರಿದವರೇ ? | ಹೌದು/ಇಲ್ಲ |
| | 7. ಪರಿಶಿಷ್ಟ ಪಂಗಡಕ್ಕೆ(ಎಸ್.ಟಿ.)ಸೇರಿದವರೇ? | ಹೌದು/ಇಲ್ಲ |
| | 8. ಪ್ರವರ್ಗ–1 ಕ್ಕೆ ಸೇರಿದವರೇ ? | ಹೌದು/ಇಲ್ಲ |
| | 9. ಪ್ರವರ್ಗ–2ಎ ಗೆ ಸೇರಿದವರೇ ? | ಹೌದು/ಇಲ್ಲ |
| | 10. ಪ್ರವರ್ಗ–2ಬಿ ಗೆ ಸೇರಿದವರೇ ? | ಹೌದು/ಇಲ್ಲ |
| | 11. ಪ್ರವರ್ಗ–3ಎ ಗೆ ಸೇರಿದವರೇ ? | ಹೌದು/ಇಲ್ಲ |
| | 12. ಪ್ರವರ್ಗ–3ಬಿ ಗೆ ಸೇರಿದವರೇ ? | ಹೌದು/ಇಲ್ಲ |
| | 13. ಇತರೆ | ಹೌದು/ಇಲ್ಲ |
| | 14. ಯೋಜನಾ ನಿರಾಶ್ರಿತರೇ? | ಹೌದು/ಇಲ್ಲ |
| | ಸೂಚನೆ:–ಹೌದು ಆಗಿದ್ದಲ್ಲಿ, ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಲಗತ್ತಿಸುವುದು. ಪ್ರಮಾಣ ಪತ್ರವು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಹೊಂದಿರಬೇಕು. | ಸಕ್ಷಮ ಪ್ರಾಧಿಕಾರ ನಂ.<br>ದಿನಾಂಕ: |
| 6. | ಹುದ್ದೆಗೆ ನಿಗದಿಪಡಿಸಿರುವ ಶುಲ್ಕವನ್ನು ಸಂದಾಯ ಮಾಡಿದ್ದೀರಾ ?<br>ಆಗಿದ್ದಲ್ಲಿ, ಅಂಚೆ ಆದೇಶದ ಕ್ರಮಾಂಕ ಮತ್ತು ದಿನಾಂಕ ತಿಳಿಸಿ.(Indian Postal Order) | (Indian Postal Order)<br>ಕ್ರಮ ಸಂಖ್ಯೆ:<br>ದಿನಾಂಕ:<br>ಮೊತ್ತ: |
| 7. | ಅಭ್ಯರ್ಥಿಯು ಯಾವುದಾದರೂ ಕ್ರಿಮಿನಲ್ ಮೊಕದ್ದಮೆಯಲ್ಲಿ ಭಾಗಿಯಾಗಿದ್ದೀರಾ, ಆಗಿದ್ದಲ್ಲಿ ಅದರ ಪೂರ್ಣ ವಿವರ ನೀಡತಕ್ಕದ್ದು. | |

**8. ಶೈಕ್ಷಣಿಕ ವಿದ್ಯಾರ್ಹತೆಯ ವಿವರ:**

| ಕ್ರ. ಸಂ. | ಉತ್ತೀರ್ಣವಾಗಿರುವ ಪರೀಕ್ಷೆ | ಗರಿಷ್ಠ ಅಂಕ | ಪಡೆದ ಅಂಕ | ಶೇಕಡಾವಾರು |
|---|---|---|---|---|
| **1** | ಎಸ್. ಎಸ್. ಎಲ್. ಸಿ. | | | |
| **2** | ಕನ್ನಡ ಬೆರಳಚ್ಚು ಪ್ರೌಢ ದರ್ಜೆ | | | |
| **3** | ಆಂಗ್ಲ ಬೆರಳಚ್ಚು ಪ್ರೌಢ ದರ್ಜೆ | | | |
| **4** | ಕನ್ನಡ ಶೀಘ್ರಲಿಪಿ ಪ್ರೌಢ ದರ್ಜೆ | | | |
| **5** | ಆಂಗ್ಲ ಶೀಘ್ರಲಿಪಿ ಪ್ರೌಢ ದರ್ಜೆ | | | |

**ಅಥವಾ / OR**

ತತ್ಸಮಾನ ವಿದ್ಯಾರ್ಹತೆ: (**As per G.O.No.ED 174 TPE 2005, Bengaluru, dated 09.11.06)**

| ಕ್ರ. ಸಂ. | ಉತ್ತೀರ್ಣವಾಗಿರುವ ಪರೀಕ್ಷೆ | ಗರಿಷ್ಠ ಅಂಕ | ಪಡೆದ ಅಂಕ | ಶೇಕಡಾವಾರು |
|---|---|---|---|---|
| **1** | | | | |
| **2** | | | | |
| **3** | | | | |
| **4** | | | | |
| **5** | | | | |
| **6** | | | | |
| **7** | | | | |
| **8** | | | | |

ಶೈಕ್ಷಣಿಕ/ಇತರೆ ವಿದ್ಯಾರ್ಹತೆಯ ಬಗ್ಗೆ ನೀವು ಕೊಡಲಿಚ್ಛಿಸುವ ಮಾಹಿತಿ:

| | | |
|---|---|---|
| 9. | ಈ ಕೆಳಗಿನ ದಾಖಲೆಗಳನ್ನು ನಿಮಗೆ ಅನ್ವಯಿಸುವ ಮಟ್ಟಿಗೆ ಅರ್ಜಿಗೆ ಲಗತ್ತಿಸಬೇಕು. ಅವುಗಳನ್ನು ಲಗತ್ತಿಸಲಾಗಿದೆಯೇ?<br>(ಉತ್ತರ 'ಹೌದು' ಅಥವಾ 'ಇಲ್ಲ' ಎಂದು ಬರೆಯಬೇಕು) | |

| | | |
|---|---|---|
| | (1)ನೀವು ಇದುವರೆಗೂ ಸರಕಾರಿ ಸೇವೆ ಸಲ್ಲಿಸಿದ್ದರೆ/ಸಲ್ಲಿಸುತ್ತಿದ್ದರೆ ನಿಮ್ಮ ಮೇಲಧಿಕಾರಿಗಳು ನಿಮ್ಮ ಸೇವಾವಧಿ ಮತ್ತು ಇತರ ಮಾಹಿತಿಗಳ ಬಗ್ಗೆ ಕೊಟ್ಟಿರುವ ಪ್ರಮಾಣಪತ್ರದ ಪ್ರತಿ ಸಲ್ಲಿಸಿದ್ದೀರಾ?<br><br>(2) ವಿದ್ಯಾಭ್ಯಾಸ ಮಾಡಿದ ಶಾಲೆ/ಕಾಲೇಜು ಮುಖ್ಯಸ್ಥರು ನಿಮ್ಮ ನಡತೆ ಮತ್ತು ಪೂರ್ವೋತ್ತರಗಳ ಬಗ್ಗೆ ನೀಡಿದ ಪ್ರಮಾಣ ಪತ್ರದ ಪ್ರತಿ ಸಲ್ಲಿಸಿದ್ದೀರಾ?<br><br>(3) ವಾಸಿಸುತ್ತಿರುವ ಸ್ಥಳದ ಇಬ್ಬರು ಗಣ್ಯ ವ್ಯಕ್ತಿಗಳು ನಿಮ್ಮ ನಡತೆ ಮತ್ತು ಪೂರ್ವೋತ್ತರಗಳ ಬಗ್ಗೆ ನೀಡಿರುವ ಆರು ತಿಂಗಳಿಗೂ ಹಳೆಯದಲ್ಲದ ಪ್ರಮಾಣಪತ್ರದ ಪ್ರತಿ ಸಲ್ಲಿಸಿದ್ದೀರಾ?<br><br>(4) ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆಯ ಬಗ್ಗೆ ಸಂಬಂಧಪಟ್ಟ ಸಂಸ್ಥೆ/ಪ್ರಾಧಿಕಾರದವರು ನೀಡಿದ ಪ್ರಮಾಣ ಪತ್ರ ಮತ್ತು ಅಂಕಪಟ್ಟಿಗಳ ಸ್ವಯಂ ಧೃಡೀಕೃತ ಪ್ರತಿಗಳನ್ನು ಲಗತ್ತಿಸಿದ್ದೀರಾ? | |

ನನಗೆ ತಿಳಿದಿರುವಂತೆ ಮೇಲೆ ಒದಗಿಸಿರುವ ಮಾಹಿತಿಯು ನಿಜವೆಂದು ಮತ್ತು ಸತ್ಯವೆಂದು ಪ್ರಮಾಣೀಕರಿಸುತ್ತೇನೆ. ಸರ್ಕಾರಿ ಉದ್ಯೋಗಕ್ಕೆ ಸೇರಲು ಅನರ್ಹರಾಗುವಂತಹ ಯಾವ ಪೂರ್ವೋತ್ತರಗಳ ನನ್ನ ಅರಿವಿಗೆ ಬಂದಿಲ್ಲ.

ಸ್ಥಳ:
ದಿನಾಂಕ: ಅಭ್ಯರ್ಥಿಯ ಸಹಿ